ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್‌ಕುಮಾರ್ ಮತ್ತು ಶ್ರೀ ಎಸ್.ರವಿ ಇವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉತ್ತರ:

ಪ್ರಶ್ನೆ

ವಿಷಯ: ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಅಧ್ಯಕ್ಷ/ಉಪಾಧ್ಯಕ್ಷ ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಎಂ.ಪಿ, ಎಂ.ಎಲ್.ಎ ರವರುಗಳು ಬೇರೆ ವಿಳಾಸದಲ್ಲಿ ವಾಸವಿದ್ದರೂ ಸಹ ಅವರುಗಳು ಪ್ರತಿನಿಧಿಸುವ ಕ್ಷೇತ್ರದ ವ್ಯಾಪ್ತಿಯ ಯಾವುದಾದರೂ ಒಂದು ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಹೊಂದಿರುತ್ತಾರೆ. ಆದರೆ ಎಂ.ಎಲ್.ಸಿ ಗಳಿಗೆ ಈ ರೀತಿ ಅವಕಾಶ ಕಲ್ಪಿಸಿರುವುದಿಲ್ಲ. ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಯ ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆಯಲ್ಲಿ ಮತ ಚಲಾಯಿಸಲು ಎಂ.ಪಿ, ಎಂ.ಎಲ್.ಎ ರವರಿಗೂ ಅವಕಾಶ ಕಲ್ಪಿಸಿರುವಂತೆ ಎಂ.ಎಲ್.ಸಿ ರವರಿಗೂ ಮತದಾನದ ಹಕ್ಕನ್ನು ಚಲಾಯಿಸಲು ಅವಕಾಶ ಕಲ್ಪಿಸುವ ಸಂಬಂಧ ಅಗತ್ಯ ಕಾನೂನುಗಳನ್ನು ರೂಪಿಸುವ ಕುರಿತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಗಮನ ಸೆಳೆಯುವುದು.

ಉತ್ತರ

ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮ 11(ಸಿ) ಮತ್ತು (ಡಿ) ರಲ್ಲಿ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

" 11 (ಸಿ) ಚುನಾವಣಾ ಕ್ಷೇತ್ರಗಳು ಲೋಕಸಭಾ ಸದಸ್ಯರ ಹಾಗೂ ವಿಧಾನಸಭಾ ಸದಸ್ಯರುಗಳ ಯಾವ ಮುನಿಸಿಪಲ್ ಏರಿಯಾದೊಳಗೆ ಇವೆಯೋ ಆ ಮುನ್ಸಿಪಲ್ ಏರಿಯಾವನ್ನು ಪೂರ್ಣವಾಗಿ ಅಥವಾ ಭಾಗಶ: ಪ್ರತಿನಿಧಿಸುತ್ತಿರುವ ಲೋಕಸಭಾ ಸದಸ್ಯರುಗಳನ್ನು ಹಾಗೂ ವಿಧಾನಸಭಾ ಸದಸ್ಯರುಗಳನ್ನು;

(ಡಿ) ಮುನ್ಸಿಪಲ್ ಏರಿಯಾದೊಳಗೆ ಮತದಾರರಾಗಿ ನೊಂದಾಯಿತರಾದ ರಾಜ್ಯಸಭೆಯ ಸದಸ್ಯರುಗಳನ್ನು ಹಾಗೂ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಹೊಂದಿರತಕ್ಕದ್ದು".

ಮೇಲ್ಕಂಡ ನಿಯಮ 11 ರ 1(ಸಿ) ರ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 463 ಎಂಎಲ್ಆರ್ 98 ದಿನಾಂಕ: 24.08.1998 ರಲ್ಲಿ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ:-

1. ದಿ ಕರ್ನಾಟಕ ಮುನಿಸಿಪಾಲಿಟೀಸ್ ಅಂಡ್, ಅದರ್ ಲಾ (ಅಮೆಂಡೆಂಟ್) ಆಕ್ಟ್ 1998 (1998ರ ಕರ್ನಾಟಕ ಅಧಿನಿಯಮ 24) ರಲ್ಲಿ ಕರ್ನಾಟಕ ಮುನಿಸಿಪಾಲಿಟೀಸ್ ಆಕ್ಟ್ 1964ರ ಪ್ರಕರಣ 11ರ (1) -ನೇ ಉಪ ಪ್ರಕರಣದ (ಸಿ) ಖಂಡವನ್ನು ತಿದ್ದುಪಡಿ ಮಾಡಿ ಯವುದೇ ಮುನಿಸಿಪಲ್ ಏರಿಯಾವನ್ನು ಒಳಗೊಂಡ ಕ್ಷೇತ್ರದಿಂದ ಆಯ್ಕೆಯಾಗಿ ಬಂದ ಲೋಕಸಭಾ ಸದಸ್ಯರು ಅಥವಾ ವಿಧಾನಸಭಾ ಸದಸ್ಯರಿಗೆ ಅವರ ಕ್ಷೇತ್ರದಲ್ಲಿ ಬರುವ ಮುನಿಸಿಪಲ್ ಕೌನ್ಸಿಲ್ ಗಳಲ್ಲಿ ಸದಸ್ಯರಾಗಿರಲು ಆ ಮುನಿಸಿಪಲ್ ಏರಿಯಾದ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿರಬೇಕು ಎಂಬ ಷರತ್ತನ್ನು ತೆಗೆದುಹಾಕಲಾಗಿದೆ. ತತ್ಪರಿಣಾಮವಾಗಿ ಲೋಕಸಭಾ ಸದಸ್ಯರು ಮತ್ತು ವಿಧಾನಸಭಾ ಸದಸ್ಯರು ಅವರ ಕ್ಷೇತ್ರದಲ್ಲಿ ಬರುವ ಎಲ್ಲಾ ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುತ್ತಾರೆ.